ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ $B^+$ (CGPA: 2.74) ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 jsscwk@gmail.com www. jsscwkgl.org

ದಿ:20.7.2026

ಕೊಳ್ಳೇಗಾಲ:20.07.2026 ಹಣಕಾಸು (Finance) ಕ್ಷೇತ್ರವು ತಂತ್ರಜ್ಞಾನ, ಜಾಗತೀಕರಣ ಹಾಗೂ ಡಿಜಿಟಲ್ ಪರಿವರ್ತನೆಯ ಪರಿಣಾಮವಾಗಿ ವೇಗವಾಗಿ ಬದಲಾಗುತ್ತಿದೆ. ಇಂದಿನ ಹಣಕಾಸು ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆ (AI), ಡಿಜಿಟಲ್ ಪಾವತಿಗಳು, ಬ್ಲಾಕ್‌ಚೈನ್, ಫಿನ್‌ಟೆಕ್, ಹಸಿರು ಹಣಕಾಸು (Green Finance) ಮತ್ತು ಡೇಟಾ ವಿಶ್ಲೇಷಣೆ ಪ್ರಮುಖ ಪಾತ್ರವಹಿಸುತ್ತಿವೆ ಎಂದು ಶ್ರೀ ಸಿ ಎ ವಿನೋಧ್ ಚಂದ್ರನ್ರn , ನಿರ್ದೇಶಕರು, ಮೈಲಾಜಿಕ್ ಸ್ಕೂಲ್ ಪ್ರೈವೇಟ್ ಲಿಮಿಡೆಟ್, ಬೆಂಗಳೂರು ಇವರು ತಿಳಿಸಿದರು.

ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದ ವತಿಯಿಂದ ಆಯೋಜಿಸಿದ್ದ “ಹಣಕಾಸು ಕ್ಷೇತ್ರದಲ್ಲಿ ಉದಯೋನ್ಮುಖ ಪ್ರವೃತ್ತಿಗಳು” ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ.ಹೆಚ್.ಎಸ್ ಕೊಂಗಳಪ್ಪ ಇವರು ಹೊಸ ಪ್ರವೃತ್ತಿಗಳು ಬ್ಯಾಂಕಿಂಗ್, ಹೂಡಿಕೆ, ವಿಮೆ ಮತ್ತು ಹಣಕಾಸು ನಿರ್ವಹಣೆಯ ವಿಧಾನಗಳನ್ನು ಸಂಪೂರ್ಣವಾಗಿ ಬದಲಾಯಿಸುತ್ತಿವೆ. ಉದಯೋನ್ಮುಖ ಹಣಕಾಸು ಪ್ರವೃತ್ತಿಗಳು ಹಣಕಾಸು ಕ್ಷೇತ್ರವನ್ನು ಹೆಚ್ಚು ವೇಗವಾದ, ಪಾರದರ್ಶಕ ಮತ್ತು ಪರಿಣಾಮಕಾರಿಯನ್ನಾಗಿ ಮಾಡುತ್ತಿವೆ. ಆದರೆ, ಈ ಹೊಸ ತಂತ್ರಜ್ಞಾನಗಳನ್ನು ಸುರಕ್ಷಿತವಾಗಿ ಬಳಸಲು ಸೂಕ್ತ ನಿಯಂತ್ರಣ, ಸೈಬರ್ ಭದ್ರತೆ ಮತ್ತು ಹಣಕಾಸು ಜಾಗೃತಿ ಅಗತ್ಯವಾಗಿದೆ ಎಂದು ತಿಳಿಸಿದರು.

ಶ್ರೀ ಸಿ ಎ ವಿನೋಧ್ ಚಂದ್ರನ್ರಎ, ನಿರ್ದೇಶಕರು, ಮೈಲಾಜಿಕ್ ಸ್ಕೂಲ್ ಪ್ರೈವೇಟ್ ಲಿಮಿಡೆಟ್, ಬೆಂಗಳೂರು ಇವರು "ಹಣಕಾಸು ಕ್ಷೇತ್ರದಲ್ಲಿ ಉದಯೋನ್ಮುಖ ಪ್ರವೃತ್ತಿಗಳು " ಕುರಿತು ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಪ್ರಾಚಾರ್ಯರಾದ ಡಾ .ಹೆಚ್.ಎಸ್ ಕೊಂಗಳಪ್ಪ ಹಾಗೂ ಶ್ರೀಮತಿ ವಾಣಿ ಎನ್ ರವರನ್ನು ಕಾಣಬಹುದು.

